



ಈ ಹೊಸ ತಲೆಮಾರಿನ ಯುಗದಲ್ಲಿ ಸೆಲ್ಫೀಗಳು ವಿಶ್ವದಾದ್ಯಂತ ಎಲ್ಲೆಡೆ ತಲೆಯೆತ್ತಿವೆ. ಸಾಮಾನ್ಯ ಜನರಿರಲಿ, ಸದಾ ಕಾಲ ಕ್ಯಾಮರಾದ ಮುಂದೆಯೇ ಜೀವನ ಸಾಗಿಸುವ ಪ್ರಸಿದ್ಧ ತಾರೆಯರಿಗೂ ಸೆಲ್ಫೀಗಳ ಮೇಲೆ ವ್ಯಾಮೋಹ! ಕೆಲವರಿಗೆ ಸೆಲ್ಫೀಗಳಿಲ್ಲದ ಬದುಕಿಲ್ಲ! ಮತ್ತೆ ಕೆಲವರಿಗೆ ಅವುಗಳನ್ನು ಕಂಡರಾಗದು!

ಸೆಲ್ಫೀಗಳು ಸಾಮಾಜಿಕ ಸಮೂಹ ತಾಣಗಳ ಕಾರಣ ಇನ್ನೂ ಹೆಚ್ಚಿನ ಜನಪ್ರಿಯತೆಯನ್ನು ಗಳಿಸುತ್ತಾ ಹೋಗುತ್ತಿವೆ. ಇದು ಎಲ್ಲರ ಕೈಯಲ್ಲಿ ಈಗ ಸ್ಮಾರ್ಟ್ ಫೋನ್ ಅಥವಾ ಕ್ಯಾಮರಾಗಳು ಇರುವ ಕಾರಣಕ್ಕೋ? ಅಥವಾ ಫೋನುಗಳ ಮುಂದೆ, ಕ್ಯಾಮೆರಾದ ಮುಂದೆ ನಿಂತು ಮುಖ ತಿರುವಿ ಫೋಟೋಗಳಿಗೆ ಪೋಸ್ ಕೊಡುವ ಜನರ ಹೊಸ ಮಿದುಳಿನ ಮಿಡಿತವೋ? ಇವೆಲ್ಲಕ್ಕಿಂತ ಮೀರಿದ ಕಾರಣಗಳೂ ಇವೆಯೋ? ಒಟ್ಟಿನಲ್ಲಿ ಅವುಗಳ ಜನಪ್ರಿಯತೆ ಯುವಜನಾಂಗದಲ್ಲಿ ಇನ್ನಿಲ್ಲದಂತೆ ಕಾಣಿಸಿಕೊಂಡಿದೆ. ಇದರ ಹಿಂದೆ ಇರುವ ಮಾನಸಿಕ ಸ್ಥಿತಿ ಏನು?

2016 ರ ಏಪ್ರಿಲ್‌ನಲ್ಲಿ ಬಂದ ವರದಿಗಳ ಪ್ರಕಾರ, ಒಟ್ಟು 8463 ದಶಲಕ್ಷ ಸಾಮಾಜಿಕ ತಾಣಗಳ ಅಕೌಂಟ್‌ಗಳು ಬಳಕೆಯಲ್ಲಿವೆ. ಫೇಸ್‌ಬುಕ್ ಅಗ್ರಸ್ಥಾನದಲ್ಲಿದ್ದು 1590 ದಶಲಕ್ಷ ಜನರು ಅದನ್ನು ಉಪಯೋಗಿಸುತ್ತಾರೆ. ಅದರ ಪ್ರತಿಸ್ಪರ್ಧಿ ವಾಟ್ಸಾಪ್‌ನ 1000 ದಶಲಕ್ಷ ಅಕೌಂಟ್‌ಗಳು ಬಳಕೆಯಲ್ಲಿವೆ. ಫೇಸ್ ಬುಕ್ ಮೆಸೆಂಜರ್ ಅನ್ನು 900 ದಶಲಕ್ಷ ಜನರು ಉಪಯೋಗಿಸಿದರೆ, ಕ್ಯೂಕ್ಯೂ ವನ್ನು 853 ದಶಲಕ್ಷ ಜನರು, ವಿ ಚಾಟ್ ಅನ್ನು 697 ದಶಲಕ್ಷ ಜನರು, ಕ್ಯೂಝೋನ್ ಅನ್ನು 640 ದಶಲಕ್ಷ ಜನರು ಬಳಸುತ್ತಾರೆ. 555 ದಶಲಕ್ಷ ಬಳಕೆದಾರರೊಂದಿಗೆ ಟ್ವಿಟ್ಟರ್ ನದ್ದು ನಂತರದ ಸ್ಥಾನ. ಹೀಗೆ ಈ ಪಟ್ಟಿ ಬೆಳೆಯುತ್ತಾ ಹೋಗುತ್ತದೆ. ಈ ಪಟ್ಟಿಯಲ್ಲಿ ಒಬ್ಬನೇ ವ್ಯಕ್ತಿಗೆ/ ಸಂಸ್ಥೆಗೆ ಹಲವು ತಾಣಗಳ ಅಕೌಂಟ್‌ಗಳೂ ಇರಬಹುದು. ಇವರಲ್ಲಿ ಬಹುತೇಕರು ಸೆಲ್ಫೀಗಳ ಪ್ರೇಮಿಗಳು!

## ಉದ್ದೇಶ ಏನು?

ಇದನ್ನು ಮನುಷ್ಯನ ಮಾನಸಿಕ ಮತ್ತು ಮಿದುಳಿನ ಬೆಳವಣಿಗೆಯ ಜೊತೆ ಹೊಂದಿಸಿ ನೋಡೋಣ. ಕಾಲವನ್ನೂ ಜೊತೆಗೆ ಕೂಡೋಣ.

ಮಕ್ಕಳಾಗಿದ್ದಾಗ ಅವಮಾನದ ಆತಂಕ ಮನುಷ್ಯನಿಗಿರುವುದಿಲ್ಲ! ಸ್ವಲ್ಪ ಬೆಳೆದಂತೆ ಇನ್ನಿಲ್ಲದ ನಾಚಿಕೆ ತೋರುವ ಮಕ್ಕಳಲ್ಲಿ ತಮ್ಮನ್ನು ಮಾತನಾಡಿಸುವ, ಕೆನ್ನೆ ಸವರುವ ಇತರ ಜನರ ಬಗ್ಗೆ ವಿಶೇಷ ಅಂಜಿಕೆ ಬರುವುದನ್ನು ಕಾಣುತ್ತೇವೆ. ಇದು ಮನುಷ್ಯನ ಮಿದಿಳಿನ ಸಂಕೀರ್ಣ ಚಿಂತನೆಯ ಶಕ್ತಿಯನ್ನು ಮತ್ತು ಗಮನಿಸುವ ಮೂಲಕ ಕಲಿಯುವಿಕೆಯನ್ನು ಸೂಚಿಸುತ್ತದೆ. ಜತೆಗೆ ವಿಚಾರಗಳನ್ನು ವಿಶ್ಲೇಷಿಸುವ ಮಾನವನ ಮಿದುಳಿನ ಕ್ರಿಯೆಯನ್ನೂ ಸೂಚಿಸುತ್ತದೆ. ಮಾತನಾಡಿಸಿದರೆ ನಾಚಿ ಅಪ್ಪ – ಅಮ್ಮನ ಹಿಂದಕ್ಕೆ ಸರಿಯುವ 5–6 ವರ್ಷದ ಮಕ್ಕಳು ಆ ಹೊತ್ತಿಗಾಗಲೇ ಈ ಕ್ರಿಯೆಯಲ್ಲಿ ತೊಡಗಿಕೊಂಡಿರುತ್ತಾರೆ.

ತಾರುಣ್ಯಕ್ಕೆ ಬರುವ ವೇಳೆಗೆ ತಮ್ಮ ದೇಹದ ಬದಲಾವಣೆಗಳನ್ನು ಗಮನಿಸುವ ಮನುಷ್ಯನ ಮೆದುಳು ಒಂದು ಬಗೆಯ ವಿಶೇಷವಾಗಿ ಗುರುತಿಸಿಕೊಳ್ಳುವ, ತನ್ನತನದ ಅರಿವಿನ (ಸೆಲ್ಫ್ ಇಮೇಜ್) ಬಗ್ಗೆ ಜಾಗೃತಗೊಳ್ಳುತ್ತದೆ. ಮಕ್ಕಳಲ್ಲಿ ಇದು ಸಂಕೀರ್ಣ ಮನಸ್ಥಿತಿಯ ಸಮಯ.

ಮನೆಯವರ ಬಳಿ ಕೂಡ ಹೇಳಿಕೊಳ್ಳಲಾಗದ ತುಮುಲಗಳನ್ನು ಹೊಂದಿರುವ ಈ ಸಮಯ ಸಂಕೀರ್ಣವಾದದ್ದು. ಹಿಂದಿನ ತಲೆಮಾರಿನಲ್ಲಾಗಿದ್ದರೆ, ಗೆಳತಿಯರು, ಗೆಳೆಯರಲ್ಲಿ ಮಾತ್ರ ಹೇಳಿಕೊಳ್ಳಬಹುದಾದ ಕೆಲವು ಭಾವನೆಗಳಿಗೆ, ಭಾವನೆಯ ವಿಕಾರಗಳಿಗೆ, ಈ ತಲೆಮಾರಿನಲ್ಲಿ ಸೋಶಿಯಲ್ ಮೀಡಿಯಾಗಳು ಒಂದು ಬಗೆಯಲ್ಲಿ ನಿರಾಳತೆಯನ್ನು ಒದಗಿಸಿವೆ. ಕನ್ನಡಿಯಲ್ಲಿ ನಿರುಕಿಸಿ ಮಾತ್ರ ತಣಿಯದ ಕುತೂಹಲಗಳನ್ನು, ಬಾಡಿ ಇಮೇಜಿನ ಬಗೆಯ ಹೆಮ್ಮೆಯನ್ನು, ಸಂಕೋಚಗಳನ್ನು ಸೆಲ್ಫೀಗಳ ಮೂಲಕ ಹೊರಹಾಕುವ ದಾರಿ ಈಗಿನ ತಲೆಮಾರಿನವರಿಗೆ ಸಿಕ್ಕಿದೆ. ಇದಕ್ಕೆ ಯಾವ ಹಂಗೂ ಇಲ್ಲದ ಕಾರಣ, ಯುವಜನರಲ್ಲಿ ಈ ಬಗ್ಗೆ ಅಪಾರ ಪ್ರೀತಿಯಿದೆ. ವ್ಯಾಮೋಹವೂ ಇದೆ.

ಈ ಮಾಧ್ಯಮಗಳಲ್ಲಿ ಇವರೇ ನಿಯಂತ್ರಕರು. ಸಾಮಾಜಿಕ ತಾಣಗಳು